ಅಮೆರಿಕದಲ್ಲಿ ವಿಶ್ವವಿದ್ಯಾಲಯಗಳ ಒಕ್ಕೂಟ ‘ ಪ್ರೋಗ್ರಾಂ ಮ್ಯಾಕ್ಸ್ ಓಪನ್ ಕೋರ್ಸ್’ 2017ರಲ್ಲಿ ಆರಂಭವಾಯಿತು. ಜಗತ್ತಿನ ಯಾವ ಮೂಲೆಯಲ್ಲಾದರೂ ಕುಳಿತು ಅಧ್ಯಯನ ಮಾಡುವ ಅವಕಾಶ ಇದಾಗಿತ್ತು. ಆನ್‌ಲೈನ್‌ನಲ್ಲಿಯೇ ವಿಷಯವಾರು ಹೊಸ ಹೊಸ ಕೋರ್ಸ್ ಅಧ್ಯಯನ ಮಾಡಬಹುದು. ಅದರಲ್ಲಿ 200ರಿಂದ 300 ಕೋರ್ಸ್‌ಗಳನ್ನು ಮಾಡಿದ್ದೇನೆ. 16ಕ್ಕೂ ಅಧಿಕ ಇಂಡಸ್ಟ್ರೀಯಲ್ ಸರ್ಟಿಫಿಕೆಟ್‌ಗಳನ್ನು ಗಳಿಸಿದ್ದೇನೆ. ಇವೆಲ್ಲಾ ನನ್ನ ನೆರವಿಗೆ ಬರುತ್ತಿವೆ. ಕೌಶಲ್ಯ ತರಬೇತಿಯನ್ನು ಸರಪಳಿಯ ರೀತಿಯಲ್ಲಿ ಪರಸ್ಪರ ಸಹಕಾರ ನೀಡುವುದು ನಮ್ಮ ಉದ್ದೇಶ. ಅಂದರೆ ನಾವು ಒಬ್ಬ ಎಂಜಿನಿಯರ್ ವಿದ್ಯಾರ್ಥಿಗೆ ತರಬೇತಿ ನೀಡಿದರೆ, ಅವರು ಮತ್ತೊಂದು ಎನ್‌ಜಿಓಗೆ ಅವರ ಕಲಿಕೆಯನ್ನು ವಿಸ್ತರಿಸಬೇಕು.

◆ **ಹೊಸ ಆಲೋಚನೆ ಹೇಗೆ ಹೊಳೆಯುತ್ತವೆ?**

ವಿವಿಧ ಜ್ಞಾನಶಾಖೆಗಳ ಪುಸ್ತಕಗಳನ್ನು ಓದುತ್ತೇನೆ. ಅವು ಬಹುಮುಖ ಆಲೋಚನೆಗೆ ಕಾರಣ ಆಗುತ್ತವೆ. ನಾನು ವಾರಕ್ಕೆ ಒಂದೆರಡು ಪುಸ್ತಕಗಳನ್ನು ಓದುತ್ತೇನೆ. ಪುಸ್ತಕಗಳನ್ನು ಓದುವುದರಿಂದ ಹೊಸ ಹೊಸ ಯೋಚನೆಗಳು ಹೊಳೆಯುತ್ತವೆ.

◆ **ನಿಮ್ಮ ಊರು, ಕುಟುಂಬದ ಬಗ್ಗೆ ಹೇಳಿ.**

ಹುಟ್ಟಿದ್ದು ಮಂಗಳೂರು. ಬೆಳೆದಿದ್ದು ಶ್ರೀರಂಗಪಟ್ಟಣ. ಪ್ರೌಢಶಾಲೆವರೆಗೂ ಅಲ್ಲೇ ಓದಿದ್ದೇನೆ. ಈಗ ನನ್ನ ಹುಟ್ಟೂರಾದ ಮಂಗಳೂರಿನ ಸೇಂಟ್ ಅಲೋಷಿಯಸ್ ಕಾಲೇಜಿನಲ್ಲಿ ದ್ವಿತೀಯ ಪಿಯು ಓದುತ್ತಿದ್ದೇನೆ. ತಂದೆ ಅನಾರ್ಕಲಿ ಸಲೀಂ ಪಾಷಾ, ಹಿರಿಯ ಆರೋಗ್ಯ ನಿರೀಕ್ಷಕರು. ತಾಯಿ ಡಾ. ಪರ್ವೀನ್ ಸಲೀಂ, ಶಿಕ್ಷಕಿ. ಇಬ್ಬರೂ ಸಾಹಿತಿಗಳು. ತಂಗಿ ಶಬನಂ ನಾಲ್ಕನೇ ತರಗತಿ ಓದುತ್ತಿದ್ದಾಳೆ. ನನ್ನ ಜೊತೆ ಆಕೆಯೂ ಸುತ್ತುತ್ತಾಳೆ. ನನ್ನ ಎಲ್ಲಾ ಸ್ಪರ್ಧೆಗೂ ಸಹಾಯಕಿಯಾಗಿ ನನ್ನ ತಾಯಿ ಕೆಲಸ ಮಾಡುತ್ತಿದ್ದಾರೆ. ಮನೆಯಲ್ಲಿ ಪುಟ್ಟ ತಂಗಿಯೊಬ್ಬಳನ್ನು ಬಿಟ್ಟು ಹೋಗುವುದು ಹೇಗೆಂದು ಆಕೆಯನ್ನೂ ಕರೆದುಕೊಂಡು ಹೋಗುತ್ತೇವೆ.

### ಸುಹೇಲ್‌ಗೆ ಸಂದ ಪುರಸ್ಕಾರಗಳು

- 2018 ನೇ ಸಾಲಿನ ಅನ್ವೇಷಣಾ ವಿಭಾಗದಲ್ಲಿ ಪ್ರಧಾನ ಮಂತ್ರಿ ಬಾಲ ಶಕ್ತಿ ಪುರಸ್ಕಾರ್ ರಾಷ್ಟ್ರೀಯ ಪ್ರಶಸ್ತಿ.
- ಎರಡು ಬಾರಿ ರಾಜ್ಯ ಯುವ ವಿಜ್ಞಾನಿ ಪ್ರಶಸ್ತಿ
- ಎರಡು ಬಾರಿ ಭಾರತ ವಿಜ್ಞಾನ ಪರಿಷತ್ ಸಮಾವೇಶದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ್ದಾರೆ
- 25ಕ್ಕೂ ಹೆಚ್ಚು ವಿಜ್ಞಾನ ಸ್ಪರ್ಧೆಗಳಲ್ಲಿ ಪ್ರಶಸ್ತಿಯನ್ನು ಗಳಿಸಿದ್ದಾರೆ
- ಕಳೆದ ವರ್ಷ ಅಮೆರಿಕದಲ್ಲಿ ಜರುಗಿದ ಅಂತರರಾಷ್ಟ್ರೀಯ ವಿಜ್ಞಾನ ಸಮಾವೇಶದಲ್ಲಿ ಭಾರತದ ಪ್ರತಿನಿಧಿಯಾಗಿ ನಾಲ್ಕು ಪ್ರಶಸ್ತಿಗಳನ್ನು ಗಳಿಸಿದ್ದಾರೆ.

◆ **ನಾಳೆಗಳ ಬಗ್ಗೆ ಯೋಚನೆ ಏನು?**

ಮುಂದಿನ ಹತ್ತು ವರ್ಷಗಳ ಆಲೋಚನೆ ಚಿಗುರೊಡೆದಿದೆ. ಎನ್‌ಜಿಓ ಮೂಲಕ ಉದ್ಯಮಶೀಲತೆಯನ್ನು ಮಾಡಬೇಕು. ಸಂಶೋಧನೆ ಆಧಾರಿತ ಉದ್ಯಮವನ್ನು ಆರಂಭಿಸಬೇಕು. ಈ ಸಂಬಂಧ ಅಮೆರಿಕ ಎಂಐಟಿಗೆ ಹೋಗುವ ಸಾಧ್ಯತೆ ಇದೆ. ಅದೇ ಪ್ರೋಗ್ರಾಂ ಮೇಲೆ ನಾಲ್ಕು ತಿಂಗಳು ಲಂಡನ್ನಿಗೂ ಹೋಗುವ ಆಸೆ ಇದೆ. ಜಗತ್ತಿನ ಎಲ್ಲಾ ಸಂಶೋಧನೆಗಳು ಸುಲಭವಾಗಿ ಜನರನ್ನು ತಲುಪಬೇಕು. ಇಲ್ಲದಿದ್ದರೆ ಎಲ್ಲಾ ಸಂಶೋಧನೆಗಳು ಕೇವಲ ದಾಖಲೆಯಾಗಿ ಮಾತ್ರ ಉಳಿಯುತ್ತವೆ. ಉದಾಹರಣೆಗೆ ನಮ್ಮ ಅಪೌಷ್ಟಿಕ ಪರೀಕ್ಷೆಯನ್ನೇ ತೆಗೆದುಕೊಂಡರೆ ಅದು ಜನರಿಗೆ ಸುಲಭಕ್ಕೆ ಸಿಗಬೇಕು ಎನ್ನುವುದು ನಮ್ಮ ಯೋಚನೆ. ಸರ್ಕಾರ ‘ಯುಪಿ’ ಎನ್ನುವ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದೆ. ಅದು ಬಹುತೇಕರಿಗೆ ಗೊತ್ತಿಲ್ಲ. ಅದೇ ತಂತ್ರಜ್ಞಾನವನ್ನು ಬಳಸಿ ಪೇಟಿಯಂ, ಫೋನ್ ಪೇಗಳು ಸಿದ್ಧಪಡಿಸಿದ ಆ್ಯಪ್ ಜನಪ್ರಿಯವಾಗಿವೆ. ಇದನ್ನೇ ಎನ್‌ಜಿಓ ಮೂಲಕ ಮಾಡುವುದು ನಮ್ಮ ಉದ್ದೇಶ. ■


